# ಗಾಂಧಿನಗರ ಪೋಸ್ಟ್

## ಈ ಕಾಲದ 'ಕವಿ'



'ಪ್ರತಿಯೊಬ್ಬರಲ್ಲೂ ಕವಿ ಇರುತ್ತಾನೆ. ಆದರೆ, ತಮ್ಮೊಳಗೊಬ್ಬ ಕವಿ ಇರುವುದು ಬಹಳಷ್ಟು ಜನರಿಗೆ ಗೊತ್ತೇ ಇರುವುದಿಲ್ಲ' ಎನ್ನುವ ಎಂ.ಎಸ್. ತ್ಯಾಗರಾಜ್, ತಮ್ಮ ಕವಿ–ಕಾವ್ಯ ಮೀಮಾಂಸೆಯನ್ನು ಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ. ಅವರ ಚೊಚ್ಚಲ ನಿರ್ದೇಶನದ ಸಿನಿಮಾದ ಹೆಸರು 'ಕವಿ'.

ಶೀರ್ಷಿಕೆಯ ಹಿನ್ನೆಲೆಯಲ್ಲಿ 'ಕವಿ' ಕಾವ್ಯಾತ್ಮಕ ಸಿನಿಮಾ ಎಂದು ಭಾವಿಸಬೇಡಿ ಎನ್ನುತ್ತಾರೆ ನಿರ್ದೇಶಕರು. 'ಇದೊಂದು ಪಕ್ಕಾ ಕಮರ್ಷಿಯಲ್ ಸಿನಿಮಾ. ನಮ್ಮೊಳಗಿರುವ ಕವಿ ಸರಿಯಾದ ಸಮಯಕ್ಕೆ ಹೊರಬರಬೇಕು. ಇಲ್ಲದೆ ಹೋದರೆ ಗೊಂದಲಗಳಾಗುತ್ತವೆ' ಎನ್ನುವ ತ್ಯಾಗರಾಜ್, ತಮ್ಮ ಈ ಜಿಜ್ಞಾಸೆಯನ್ನೇ ಸಿನಿಮಾದಲ್ಲಿ ಹೇಳಿದ್ದಾರಂತೆ. ಸಂಗೀತ ನಿರ್ದೇಶಕರಾಗಿ ಚಿತ್ರರಂಗದಲ್ಲಿ ಗುರ್ತಿಸಿಕೊಂಡಿರುವ ಅವರಿಗೆ, 'ಕವಿ'ಯ ಮೂಲಕ ನಿರ್ದೇಶಕನಾಗಿಯೂ ಗೆಲುವು ಕಂಡುಕೊಳ್ಳುವ ವಿಶ್ವಾಸ.

ಶೋಭಿತಾ ಹಾಗೂ ಪುನೀತ್‌ಗೌಡ ಚಿತ್ರದ ನಾಯಕ–ನಾಯಕಿ. ಪುನೀತ್ ನಟನೆಯ ಜೊತೆಗೆ ಚಿತ್ರಕ್ಕೆ ಬಂಡವಾಳವನ್ನೂ ಹೂಡಿದ್ದಾರೆ. ನಿರ್ದೇಶಕರು ಹೇಳಿದ ಕಥೆ ಅವರಿಗೆ ಸಿಕ್ಕಾಪಟ್ಟೆ ಇಷ್ಟವಾಗಿದ್ದರಿಂದ ನಿರ್ಮಾಪಕನಾಗುವ ಧೈರ್ಯ ಮಾಡಿದ್ದಾರೆ. ಶೋಭಿತಾ ಅವರಿಗೂ 'ಕವಿ' ಇಷ್ಟವಾಗಿದ್ದಾನೆ. ಕವಿಯೆಂದು ನಂಬಿ ಮದುವೆಯಾದ ಹುಡುಗನಿಂದ ಭ್ರಮನಿರಸನವಾಗುವ, ಅಂತಿಮವಾಗಿ ಅವನು ತನ್ನ ಕನಸಿನ ಹುಡುಗನಾಗಿ ರೂಪಾಂತರಗೊಳ್ಳುವ ಕಥೆ ಕಾವ್ಯದಂತೆಯೇ ಅವರಿಗೆ ಕಂಡಿದೆ.



## ರುಚಿ ಮೀಮಾಂಸೆ!

'ಭೀಮಸೇನ ನಳ ಮಹಾರಾಜ' ಎಂದ ಕೂಡಲೇ ಪುರಾಣ ಪ್ರಸಿದ್ಧ ವೀರ ಬಾಣಸಿಗರು ನೆನಪಾಗುತ್ತಾರೆ. ಸದ್ಯಕ್ಕೆ ಗಾಂಧಿನಗರದಲ್ಲಿ ಇದೇ ಶೀರ್ಷಿಕೆಯ ಸಿನಿಮಾ ಸುದ್ದಿ ಮಾಡುತ್ತಿದೆ. ಇದು ಕಾರ್ತಿಕ್ ಸರಗೂರು ನಿರ್ದೇಶನದ ಚೊಚ್ಚಲ ಸಿನಿಮಾ.

ತಮ್ಮ ಚಿತ್ರದ ಪ್ರಮುಖ ದೃಶ್ಯಗಳನ್ನು ಕಾರ್ತಿಕ್ ಕೊಡಚಾದ್ರಿಯಲ್ಲಿ ಚಿತ್ರಿಸಿದ್ದಾರೆ. ಕೊಡಚಾದ್ರಿಯ ಹಿನ್ನೆಲೆ ಚಿತ್ರಕ್ಕೊಂದು ವಿಶೇಷ ಪ್ರಭೆ ತಂದಿದೆಯಂತೆ. ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿರುವ ರವೀಂದ್ರನಾಥ್ ಅವರಿಗಂತೂ ಈ ಸಿನಿಮಾಕ್ಕೆ ಕೆಲಸ ಮಾಡಿರುವುದು ಹಬ್ಬದಂತೆ ಪರಿಣಮಿಸಿದೆ. ಸಂಗೀತ ಸಂಯೋಜನೆ ಮಾಡಿರುವ ಚರಣ್, ಪುರಂದರದಾಸರ ಕೀರ್ತನೆಯೊಂದನ್ನು ಚಿತ್ರದಲ್ಲಿ ಬಳಸಿಕೊಂಡಿದ್ದಾರೆ.

ಅಡುಗೆಯಲ್ಲಿ ಪ್ರಮುಖ ಪಾತ್ರ ವಹಿಸುವ ಉಪ್ಪು, ಹುಳಿ, ಖಾರ, ಕಹಿ, ಒಗರು, ಸಿಹಿಗಳನ್ನು ಪಾತ್ರಗಳ ಮೂಲಕ ನಿರ್ದೇಶಕರು ಚಿತ್ರಿಸುವ ಪ್ರಯತ್ನ ನಡೆಸಿದ್ದಾರೆ. ರುಚಿಯ ಈ ಆರೂ ಗುಣಗಳನ್ನು ಪ್ರತಿನಿಧಿಸುವ ಆರು ಪಾತ್ರಗಳು ಚಿತ್ರಕಥೆಯ ಕೇಂದ್ರದಲ್ಲಿವೆ. ಇಡೀ ಜೀವನವೇ ಒಂದು ಅದ್ಭುತ ಅಡುಗೆ ಎನ್ನುವ ಸೂಚನೆಯೂ, ಅಡುಗೆ ಮಾಡುವಲ್ಲಿ ಕೊಂಚ ಎಡವಟ್ಟಾದರೆ ಊಟದ ಸ್ವಾದ ಕೆಡುವ ಸೂಚನೆಯೂ ಚಿತ್ರದಲ್ಲಿದೆ. ಎಳೆಯರಿಂದ ಹಿರಿಯರವರೆಗೆ ಎಲ್ಲ ವಯೋಮಾನದವರು ತಮ್ಮ ಚಿತ್ರ ನೋಡಬಹುದು ಎಂದು ನಿರ್ದೇಶಕರು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಆರೋಹಿ ಮತ್ತು ಪ್ರಿಯಾಂಕ ಚಿತ್ರದ ನಾಯಕಿಯರು. ಅರವಿಂದ್ ಅಯ್ಯರ್ ಚಿತ್ರದ ನಾಯಕ. ಅರವಿಂದ್ ಕೂಡ ಅಡುಗೆ ಮಾಡುವುದರಲ್ಲಿ ಗಟ್ಟಿಗರು. ಹಾಗಾಗಿ ಚಿತ್ರದ ಶೀರ್ಷಿಕೆ ಅವರಿಗೆ ಆಪ್ತವೆನ್ನಿಸಿದೆ. ಹಾಗೆಂದು ಇದು ಅಡುಗೆಗೆ ಸಂಬಂಧಿಸಿದ ಚಿತ್ರವೆಂದು ಹೇಳುವುದು ಕಷ್ಟ. 'ಚಿತ್ರಕಥೆಯಲ್ಲಿ ನವರಸಗಳೂ ಇವೆ' ಎನ್ನುತ್ತಾರೆ ಅರವಿಂದ್. ಸೆಪ್ಟೆಂಬರ್‌ನಲ್ಲಿ ಚಿತ್ರ ತೆರೆ ಕಾಣಲಿದೆ.